ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (241) 95
ಮಾನ್ಯ ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸುವ ಸಚಿವರು : ಶ್ರೀ ಹೆಚ್ ಹಾಲಪ್ಪ
(ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ ಪ್ರಸಕ್ತ ಚಾಲ್ತಿಯಲ್ಲಿರುವ ಒಟ್ಟು ವಿವಿಧ ಪಡಿತರ ಚೀಟಿಗಳ ಸಂಖ್ಯೆ ಎಷ್ಟು .(ತಾಲ್ಲೂಕು ವಿವರ ನೀಡುವುದು)</td><td>ಪ್ರಸ್ತುತ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ವಿವಿಧ ಪಡಿತರ ಚೀಟಿಗಳ ವಿವರ ಕೆಳಕಂಡಂತಿದೆ.
<table>
<tr><th>ಪಡಿತರ ಚೀಟಿಗಳು</th><th>ವಿತರಿಸಿರುವ ಪಡಿತರ ಚೀಟಿಗಳು</th></tr>
<tr><td>ಎಎವೈ</td><td>11.99.700</td></tr>
<tr><td>ಅಕ್ಷಯ (ಬಿಪಿಎಲ್)</td><td>60.16.743</td></tr>
<tr><td>ಎಪಿಎಲ್</td><td>51.28.519</td></tr>
<tr><td>ಒಟ್ಟು</td><td>1.23.44.519</td></tr>
</table>
ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.</td></tr>
<tr><td>ಆ.</td><td>ಅರ್ಹ ಫಲಾನುಭವಿಗಳನ್ನು ಗುರುತಿಸಿ ನೀಡಬೇಕಾಗಿರುವ ಹೊಸ ಪಡಿತರ ಚೀಟಿಗಳ ಸಂಖ್ಯೆ ಎಷ್ಟು,</td><td>ಅರ್ಹ ಫಲಾನುಭವಿಗಳನ್ನು ಗುರುತಿಸಿ ನೀಡಬೇಕಾಗಿರುವ ಹೊಸ ಪಡಿತರ ಚೀಟಿಗಳ ವಿವರ ಕೆಳಕಂಡತಿದೆ.
<table>
<tr><th>ಪಡಿತರ ಚೀಟಿಗಳು</th><th>ವಿತರಿಸಬೇಕಾದ</th></tr>
<tr><td>ಎಎವೈ</td><td>0</td></tr>
<tr><td>ಅಕ್ಷಯ (ಬಿಪಿಎಲ್)</td><td>7.24.862</td></tr>
<tr><td>ಎಪಿಎಲ್</td><td>8.37.866</td></tr>
<tr><td>ಒಟ್ಟು</td><td>15.62.728</td></tr>
</table></td></tr>
<tr><td>ಇ.</td><td>ಈ ಪಡಿತರ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತರುವಲ್ಲಿ ಸರ್ಕಾರ ಎದುರಿಸುತ್ತಿರುವ ಸಮಸ್ಯೆಗಳೇನು. ಅವುಗಳ ಪರಿಹಾರಕ್ಕೆ ಸರ್ಕಾರದ ಕ್ರಮವೇನು?</td><td>ಇಲಾಖೆಯು ಎದುರಿಸುತ್ತಿರುವ ಸಮಸ್ಯೆಗಳು :-
ಫಲಾನುಭವಿಗಳ ನಿಖರವಾದ ಆದಾಯವನ್ನು ನಿರ್ಧರಣೆ ಮಾಡುವುದು ಕಷ್ಟಕರವಾಗಿರುತ್ತದೆ.
ವಿಭಜಿತಗೊಂಡ ಕುಟುಂಬಗಳ ಸಂಖ್ಯೆ ಹೆಚ್ಚುತ್ತಿರುವುದು.
ಸಾರ್ವಜನಿಕರಿಂದ ಬಿಪಿಎಲ್ ಪಡಿತರ ಚೀಟಿಗಳಿಗಾಗಿಯೇ ಹೆಚ್ಚಿನ ಸಂಖ್ಯೆಯಲ್ಲಿ ಒತ್ತಡಗಳು ಬಂದಿರುತ್ತದೆ.
ಮನೆ ಮನೆ ಸಮೀಕ್ಷೆಯಲ್ಲಿ ಅರ್ಹ ಫಲಾನುಭವಿಗಳು ಬಿಪಿಎಲ್ ಪಟ್ಟಿಯಿಂದ ಕೈಬಿಟ್ಟು ಹೋಗಿರುವ ಬಗ್ಗೆ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಾಗಿದೆ. ಸ್ವೀಕರಿಸಲಾದ ಅಹವಾಲುಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಅರ್ಹತೆಗನುಗುಣವಾಗಿ ಪಡಿತರ ಚೀಟಿಗಳನ್ನು ವಿತರಿಸಲು ಕ್ರಮ ವಹಿಸಲಾಗಿದೆ.</td></tr>
</table>

		ಸಮಗ್ರ ಗಣಕೀಕರಣ ಯೋಜನೆಯಡಿಯಲ್ಲಿ ಎಲ್ಲಾ ಕುಟುಂಬಗಳ ಭಾವಚಿತ್ರ ಹಾಗೂ ಜೀವಮಾಪಕಗಳನ್ನು ಸೆರೆ ಹಿಡಿದು ಖಾಯಂ ಅಗಿ ಗಣಕೀಕೃತ ಪಡಿತರ ಚೀಟಿಗಳನ್ನು ವಿತರಿಸಲು ಈಗಾಗಲೇ ಕ್ರಮವಹಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (242) 96
ಮಾನ್ಯ ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ.
ಉತ್ತರಿಸುವ ಸಚಿವರು : ಶ್ರೀ ಹೆಚ್. ಹಾಲಪ್ಪ
(ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿನ ಬಡ ಕುಟುಂಬಗಳಿಗೆ ರಿಯಾಯಿತಿ ದರದಲ್ಲಿ ಆಹಾರಧಾನ್ಯಗಳನ್ನು ವಿತರಿಸುವ ಯೋಜನೆಯು ಸರ್ಕಾರದ ಗಮನದಲ್ಲಿದೆಯೇ?	ಹೌದು.
ಆ.	ಹಾಗಿದ್ದಲ್ಲಿ ಯೋಜನೆಗಳಾವುವು?	ಅಂತ್ಯೋದಯ ಅನ್ನ ಯೋಜನೆ ಹಾಗೂ ಅಕ್ಷಯ (ಬಿಪಿಎಲ್)
ಇ.	ಬಡಜನರಿಗೆ ಪಡಿತರ ವ್ಯವಸ್ಥೆಯ ಮೂಲಕ ನಿಗದಿತ ಸಮಯದಲ್ಲಿ ಆಹಾರಧಾನ್ಯಗಳನ್ನು ಸಮರ್ಪಕ ರೀತಿಯಲ್ಲಿ ವಿತರಣೆ ಮಾಡಲು ಸರ್ಕಾರದ ಕ್ರಮಗಳೇನು?	ಸರ್ಕಾರದ ಕ್ರಮಗಳು ಕೆಳಕಂಡಂತಿದೆ. ಪ್ರತ್ಯೇಕವಾಗಿ ನಿಯೋಜಿಸಲ್ಪಟ್ಟ ಸಾಗಾಣಿಕೆ ಗುತ್ತಿಗೆ ದಾರರ ಮುಖಾಂತರ ಆಹಾರಧಾನ್ಯಗಳನ್ನು ಮತ್ತು ಸೀಮೆಎಣ್ಣೆ ಭಾರತ ಆಹಾರ ನಿಗಮ/ತೈಲ ಕಂಪನಿಗಳಿಂದ ಸಗಟು ಮಾರಾಟ ಕೇಂದ್ರಗಳಿಗೆ ಸಾಗಾಣಿಕೆಯಾಗುತ್ತದೆ. ಮತ್ತು ಸಗಟು ಮಾರಾಟ ಕೇಂದ್ರದಿಂದ ನ್ಯಾಯಬೆಲೆ ಅಂಗಡಿಗಳಿಗೆ ಸಾಗಾಣಿಕೆಯಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಆಹಾರಧಾನ್ಯಗಳನ್ನು ಸಗಟು ಮಳಿಗೆಗಳಿಂದ ನ್ಯಾಯಬೆಲೆ ಅಂಗಡಿಗಳಿಗೆ ಸಾಗಾಣಿಕೆ ಮಾಡುವ ಲಾರಿ ಜೊತೆಯಲ್ಲಿ ಆಹಾರ ಪರಿವೀಕ್ಷಕರು/ ಆಹಾರ ಶಿರಸ್ತೇದಾರರು ನ್ಯಾಯಬೆಲೆ ಅಂಗಡಿಯವರೆಗೂ ಹೋಗಿ ಪಡಿತರ ಪದಾರ್ಥಗಳನ್ನು ನ್ಯಾಯಬೆಲೆ ಅಂಗಡಿಗೆ ತಲುಪಿಸುತ್ತಾರೆ. ಪಡಿತರ ಪದಾರ್ಥಗಳು ನ್ಯಾಯಬೆಲೆ ಅಂಗಡಿಗೆ ತಲುಪಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ಪಡಿತರ ಪದಾರ್ಥಗಳ ಸಾಗಾಣಿಕೆಯ ವಾಹನವು ನ್ಯಾಯಬೆಲೆ ಅಂಗಡಿ ತಲುಪಿದ ನಂತರ ಐದು ಮಂದಿ ಪಡಿತರ ಚೀಟಿದಾರರ ಸಹಿಯನ್ನು ಡೆಲಿವರಿ ನೋಟ್/ ಬಿಲ್‌ಗಳ